ಸಿ) ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಎ) 249.

ಬಿ) 1) ತುಮಕೂರು ಜಿಲ್ಲೆಯಲ್ಲಿ 24 ಆಸ್ಪತ್ರೆಗಳು.

2) ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ 2 ಆಸ್ಪತ್ರೆಗಳು.

ಸಿ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಮತ್ತು ಕರ್ನಾಟಕ ಲೋಕಸೇವಾ ಆಯೋಗದಿಂದ ವೈದ್ಯರನ್ನು ಆಯ್ಕೆ ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿರುವ ವಿದ್ಯಾಪೀಠಗಳು.

417 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ರಾಜ್ಯದಲ್ಲಿ ಸ್ಥಾಪಿಸಲಾಗಿರುವ ವಿದ್ಯಾಪೀಠಗಳೆಷ್ಟು?

ಬಿ) ಕುಣಿಗಲ್ ತಾಲ್ಲೂಕು ತರೇದ ಕುಪ್ಪೆಯಲ್ಲಿ ಅಂತಹ ವಿದ್ಯಾಪೀಠವೊಂದು ಸ್ಥಾಪನೆಯಾಗಿ ನಿಷ್ಕ್ರಿಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಸಿ) ಈ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಎ) 16.

ಬಿ) ಇಲ್ಲ.

ಸಿ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಲೇರಿಯಾ ಜ್ವರ ನಿಯಂತ್ರಿಸಲು ಒದಗಿಸಿದ ಹಣ.

418 - ಶ್ರೀ ವೈ. ರಾಮಕೃಷ್ಣ (ಆನೇಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಮರುಕಳಿಸಿದ ಮಲೇರಿಯಾ ಕಾಯಿಲೆಯಿಂದ ಸತ್ತವರ ಸಂಖ್ಯೆ ಎಷ್ಟು? ಜಿಲ್ಲೆಯಲ್ಲಿ ಎಷ್ಟು ಸಲ ಈ ಕಾಯಿಲೆ ಮರುಕಳಿಸಿದೆ ಎಂಬುದರ ಬಗ್ಗೆ ತಿಳಿಸುವುದು ಹಾಗೂ ಕಾರಣಗಳೇನು?

ಬಿ) ಆರೋಗ್ಯ ಇಲಾಖೆಯ ಅಧಿಕಾರಿಗಳ ಕರ್ತವ್ಯಲೋಪ ಹಾಗೂ ಸರ್ಕಾರ ಸಾಕಷ್ಟು ಔಷಧಿಗಳನ್ನು ಸರಬರಾಜು ಮಾಡದಿರುವುದೇ ಇದಕ್ಕೆ ಕಾರಣವಲ್ಲವೆ?

ಸಿ) 1995-96ನೇ ಸಾಲಿನಲ್ಲಿ ಮಲೇರಿಯಾ ಕಾಯಿಲೆ ನಿಯಂತ್ರಿಸಲು ಒದಗಿಸಿರುವ ಹಣವೆಷ್ಟು,ವಿಶೇಷ ಸಿಬ್ಬಂದಿಯನ್ನು ನೇಮಕಮಾಡಿಕೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ 1993ರಿಂದ ಮಲೇರಿಯಾ ರೋಗವು ಮತ್ತೆ ಮರುಕಳಿಸಿರುತ್ತದೆ. 1993ರಲ್ಲಿ ಯಾವುದೇ ಸಾವು ಸಂಭವಿಸಿರುವುದಿಲ್ಲ. ರಾಜ್ಯದಲ್ಲಿ 1994ರಲ್ಲಿ ಮಲೇರಿಯಾ ರೋಗದಿಂದ 6 ಜನ ಮೃತಪಟ್ಟಿದ್ದು 1995ರಲ್ಲಿ ಇದುವರೆಗವಿಗೆ 5 ಜನರು ಈ ರೋಗದಿಂದ ಮೃತ ಪಟ್ಟಿರುವರೆಂದು ವರದಿಯಾಗಿರುತ್ತದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 352 ಮಲೇರಿಯಾ ಪ್ರಕರಣಗಳು ವರದಿಯಾಗಿದ್ದು ಆದರಲ್ಲಿ 330 ಪ್ರಕರಣಗಳು ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕಂಡುಬಂದಿರುತ್ತದೆ. ಇವುಗಳಲ್ಲಿ ಒಟ್ಟು 329 ಪ್ರಕರಣಗಳಿಗೆ ತೀವ್ರ ಚಿಕಿತ್ಸೆ ಪೂರ್ಣವಾಗಿದ್ದು, ಉಳಿದ ಪ್ರಕರಣಗಳಿಗೆ ತೀವ್ರ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ಯಾವುದೇ ಸಾವು ಈ ರೋಗದಿಂದ ಸಂಭವಿಸಿರುವುದಿಲ್ಲ. ಆದರೆ ನಗರದ ಸೇಂಟಜಾನ್ ಆಸ್ಪತ್ರೆಯಲ್ಲಿ ಆಂಧ್ರ ಪ್ರದೇಶದಿಂದ ಬಂದಿದ್ದ ಇಬ್ಬರು ಮಲೇರೀಯಾ ರೋಗದಿಂದ ಮೃತಪಟ್ಟಿರುವುದು ವರದಿಯಾಗಿರುತ್ತದೆ.

ಮಲೇರಿಯಾ ಮರುಕಳಿಸಲು ಕಾರಣಗಳು:

ಮಲೇರಿಯಾ ಪೀಡಿತ ಹೊರರಾಜ್ಯಗಳಿಂದ ವಲಸೆ ಬಂದ ಕಾರ್ಮಿಕರು ಈ ರೋಗ ಹರಡಲು ಕಾರಣರಾಗಿರುತ್ತಾರೆ. ಅಲ್ಲದೆ ಶೇ. 80 ರಷ್ಟು ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳು ಖಾಲಿ ಇರುತ್ತವೆ.

ಆ) ಇಲ್ಲ

ರಾಜ್ಯದಲ್ಲಿ ಇದುವರೆವಿಗೆ ಒಟ್ಟು 27,64,907 ರಕ್ತ ಲೇಪನಗಳನ್ನು ಜ್ವರಪೀಡಿತರಿಂದ ಸಂಗ್ರಹಿಸಿ ಪರೀಕ್ಷಿಸಲಾಗಿದೆ. ಹಾಗೂ ರಾಜ್ಯದಲ್ಲಿ ಸಾಕಷ್ಟು ಪ್ರಮಾಣದ ಔಷಧಿಗಳು ಲಭ್ಯವಿರುತ್ತವೆ.

ಇ) 1995-96ನೇ ಸಾಲಿನಲ್ಲಿ ಮಲೇರಿಯಾ ಕಾಯಿಲೆ ನಿಯಂತ್ರಿಸಲು ಈ ಕೆಳಕಂಡ ಹಣ ಒದಗಿಸಲಾಗಿದೆ.

		ಯೋಜನೆ		ಯೋಜನೇತರ	
		ಕೇಂದ್ರ	ರಾಜ್ಯ	ಒಟ್ಟು	
1)	ಮಲೇರಿಯಾ ನಿಯಂತ್ರಣ ಕಾರ್ಯಕ್ರಮ ಗ್ರಾಮಾಂತರ	750	750	1500	785
2)	ನಗರ ಮಲೇರಿಯಾ	100	100	200	-

ಹೆಚ್ಚಿನ ಸಂಖ್ಯೆಯಲ್ಲಿ ಪ್ರಯೋಗಶಾಲಾ ತಂತ್ರಜ್ಞರ ಹುದ್ದೆಗಳು ಖಾಲಿ ಇರುವುದನ್ನು ಗಮನಿಸಿ, ಇದಕ್ಕೆ ಬದಲಿ ವ್ಯವಸ್ಥೆಯಾಗಿ 2000 ರೂಪಾಯಿ ನಿಗಧಿತ ವೇತನದಂತೆ ಸಮಸ್ಯಾತ್ಮಕ ಪ್ರಾಥಮಿಕ

ಆರೋಗ್ಯ ಕೇಂದ್ರಗಳಿಗೆ (ತುಮಕೂರು, ಹಾಸನ, ಕೋಲಾರ, ಚಿಕ್ಕಮಗಳೂರು, ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ) ಗುತ್ತಿಗೆ ಆಧಾರದ ಮೇಲೆ 35 ಮಂದಿ ಪ್ರಯೋಗಶಾಲಾ ತಂತ್ರಜ್ಞರನ್ನು ಶೀಘ್ರ ರಕ್ತಲೇಪನಗಳ ಪರೀಕ್ಷೆಗಾಗಿ ನೇಮಕ ಮಾಡಿಕೊಳ್ಳಲಾಗಿದೆ. ಪ್ರಯೋಗಶಾಲಾ ತಂತ್ರಜ್ಞರ 450 ಹುದ್ದೆಗಳಿಗೆ ಮಿತವ್ಯಯ ಆದೇಶವನ್ನು ಸಡಿಲಿಸಲಾಗಿದೆ ಮತ್ತು ಈಗಾಗಲೇ ಬಂದಿರುವ ಅರ್ಜಿಗಳನ್ನು ಪರಿಗಣಿಸಿ ಅತಿ ಶೀಘ್ರದಲ್ಲಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಧಾರವಾಡ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಪ್ರಾರಂಭಿಸಲು ಒತ್ತಾಯ.

420 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲಾ ಕೇಂದ್ರ ಹಾಗೂ ಶೈಕ್ಷಣಿಕ ಕೇಂದ್ರವೆಂದು ಸರ್ಕಾರ ಗುರುತಿಸಿದೆಯೆ?

ಆ) ಹಾಗಿದ್ದಲ್ಲಿ, ಧಾರವಾಡ ನಗರದಲ್ಲಿ ಬೇಡಿಕೆಗಳಿಗನುಗುಣವಾಗಿ ಸರ್ಕಾರಿ ಪ್ರೌಢಶಾಲೆಗಳು ಇವೆಯೇ, ಹಾಗಿದ್ದಲ್ಲಿ, ಅವುಗಳ ವಿವರ ಒದಗಿಸುವುದು?

ಇ) ಹಾಗಿದ್ದಲ್ಲಿ ಬೇಡಿಕೆಗನುಗುಣವಾಗಿ ಪ್ರೌಢಶಾಲೆಗಳನ್ನು ಸರ್ಕಾರದವರು ಪ್ರಾರಂಭಿಸಲು ಸೂಕ್ತ ಕ್ರಮಕೈಗೊಳ್ಳುವರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಧಾರವಾಡ ಜಿಲ್ಲಾ ಕೇಂದ್ರವಾಗಿದೆ. ಅನೇಕ ಶಿಕ್ಷಣ ಸಂಸ್ಥೆಗಳೂ ಇವೆ.

ಆ) ಇಲ್ಲ.

ಧಾರವಾಡನಗರದಲ್ಲಿ ಒಂದು ಸರ್ಕಾರಿ ವಸತಿ ಪ್ರೌಢಶಾಲೆ ಇದೆ.

ಇ) ಅಗತ್ಯತೆಗನುಗುಣವಾಗಿ ಪರಿಶೀಲಿಸಿ ಧಾರವಾಡ ನಗರದಲ್ಲಿ ಸರ್ಕಾರವು ಹೊಸ ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಕ್ರಮ ಕೈಗೊಳ್ಳುವುದು.

ಧಾರವಾಡದ ಪ್ರಾಥಮಿಕ ಶಿಕ್ಷಣ ತರಬೇತಿ ಸಂಸ್ಥೆಗಳಿಗೆ ಹೆಚ್ಚಿನ ನೆರವು.

421 - ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರದಲ್ಲಿ ಎರಡು ಪ್ರಾಥಮಿಕ ಶಿಕ್ಷಣದ ಬೆಳವಣಿಗೆಗೆ ತರಬೇತಿ ನೀಡುವ ಸಂಸ್ಥೆಗಳು ಇರುವುದು ನಿಜವೇ?

ಆ) ಈ ಎರಡು ಸಂಸ್ಥೆಗಳು ರಾಜ್ಯದಲ್ಲಿಯೇ ಶೈಕ್ಷಣಿಕ ನಗರವೆಂದು ಧಾರವಾಡಕ್ಕೆ ಪ್ರತೀತಿ ತುರವಲ್ಲಿ ಸರ್ಕಾರ ಕೈಗೊಂಡ ಯೋಜನೆಗಳು ಏನಾದರೂ ಇದೆಯೇ?

ಇ) ಪ್ರಾಥಮಿಕ ಶಿಕ್ಷಣದ ಬೆಳವಣಿಗೆಗೆ ತಕ್ಕಂತೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಅದ್ಯತೆ ಇದೆಯೇ?